**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ 31/15**

**(ಪ್ರಾ.ಸಾ. 2 ಚಾಸಾ- 2 )**

ತಾಃ 18-12-2017 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಂತೋಷ |
| ತಂದೆಯ ಹೆಸರು | ಃ | ಬಸವರಾಜು |
| ವಯಸ್ಸು | ಃ | 24 ವರ್ಷ |
| ಉದ್ಯೋಗ | ಃ | ಓಡಿಪಿಎಸ್ ಕಂಪನಿ , ದಾಬಾಸ್‌ಪೇಟೆ |
| ವಾಸ ಸ್ಥಳ | ಃ | ತುಮಕೂರು |

## ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

ನಾನು ದಾಬಾಸ್‌ಪೇಟೆಯಲ್ಲಿರುವ ಟಿಡಿಪಿಎಸ್ ಕಂಪನಿಯಲ್ಲಿ ಸುಮಾರು 8 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ತುಮಕಾರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದು ಅಲ್ಲಿಂದ ನನ್ನ ಕಂಪನಿ ಕೆಲಸಕ್ಕೆ ಬಂದು ಹೋಗುತ್ತೇನೆ.

ಚಾಸಾ 1 ರಘು ನನ್ನ ಜೊತೆ ನನ್ನದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಅವರೂ ಸಹ ತುಮಕೂರಿನಲ್ಲಿ ವಾಸ ಮಾಡಿಕೊಂಡಿದ್ದು ಅಲ್ಲಿಂದಲೇ ಕಂಪನಿ ಕೆಲಸಕ್ಕೆ ಬಂದು ಹೋಗುತ್ತಾರೆ.

ದಿನಾಂಕ 12-02-2014 ರಂದು ನಮ್ಮ ಕಂಪನಿಯವರು ಸಿ ವಿ ಜಿ ಶಾಲೆಯ ಬಳಿ ರಾತ್ರಿ ಹೊತ್ತಿನಲ್ಲಿ ಕಂಪನಿ ನಾಟಕ ಕುರುಕ್ಷೇತ್ರ ಮಾಡುತ್ತಿದ್ದರು. ನಾಟಕ ನೋಡಲು ನಾನು , ರಘು ಹಾಗೂ ಕಂಪನಿಯಲ್ಲಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರು ಸದರಿ ನಾಟಕಕ್ಕೆ ಹೋಗಿದ್ದೆವು . ರಾತ್ರಿ 1 ಗಂಟೆಯಾಗುವಾಗ ನನಗೆ ಚಳಿಯಾಯಿತು. ನಾನು ಮತ್ತು ರಘು ಮನೆಗೆ ವಾಪಾಸು ಹೋಗಲು ದಾಬಾಸ್‌ಪೇಟೆ ಬಸ್ ಸ್ಟಾಂಡ್ ನಿಲ್ದಾಣದ ಬಳಿ ಇದ್ದೆವು. ಅಷ್ಟರಲಿ ಒಂದು ಟಾಟಾ ಮ್ಯಾಜಿಕ್ ಗಾಡಿ ಬಂತು. ಅದರಲ್ಲಿ ನಾಲ್ಕು ಜನ ಇದ್ದರು. ಸದರಿ ಗಾಡಿ ತುಮಕೂರಿಗೆ ಹೋಗುತ್ತಾ ಎಂದು ಕೇಳಿದೆವು ಅದರಲ್ಲಿದ್ದವರು ಹೌದು ಎಂದು ಹೇಳಿದರು ನಾವು ಗಾಡಿ ಹತ್ತಿಕೊಂಡೆವು. ಸದರಿ ಗಾಡಿ ಸುಮಾರು 5 ಕಿ ಮಿ ಅಲ್ಲಿಂದ ಹೊರಟ ನಂತರ ಪಂಡಿತನಹಳ್ಳಿ ಬಳಿ ಗಾಡಿ ನಿಲ್ಲಿಸಿದರು. ಸದರಿ ಗಾಡಿಯಲ್ಲಿದ್ದವರು ನಮಗೆ ಚಾಕುವನ್ನು ಕುತ್ತಿಗೆಗೆ ಇಟ್ಟು ಹೆದರಿಸಿದರು. ನನ್ನ ಬಳಿ ಇದ್ದ 3,700 ಹಣ ಕಿತ್ತುಕೊಂಡರು. ರಘು ರವರ ಬಳಿ ಇದ್ದ 5 ಸಾವಿರ ರೂಪಾಯಿ ನಗದು, ವಾಚ್ , ಮೊಬೈಲ್ ಹಾಗೂ ಎ ಟಿ ಎಂ ಕಾರ್ಡ್ ಕಿತ್ತುಕೊಂಡರು.

ನಂತರ ಪುನಃ ನಮ್ಮನ್ನು ದಾಬಾಸ್‌ಪೇಟೆಗೆ ಅದೇ ವಾಹನದಲ್ಲಿ ಕರೆದು ಕೊಂಡು ವಾಪಾಸು ಬಂದು ಹೆಚ್ ಡಿ ಎಫ್‌ಸಿ ಎ ಟಿ ಎಂ ಬಳಿ ನಿಲ್ಲಿಸಿದರು. ಆಗ ಆರೋಪಿಗಳು ನನಗೆ ಚಾಕು ತೋರಿಸಿ ಹೆದರಿಸಿ ಗಾಡಿಯಲ್ಲಿ ಇಟ್ಟುಕೊಂಡು , ಚಾಸಾ 1 ರಘುವನ್ನು ಎ ಟಿ ಎಂ ಒಳಗೆ ಕರೆದುಕೊಂಡು

ಹೋಗಿ ಹಣ ಡ್ರಾ ಮಾಡಿಕೊಂಡು ಬಂದರು. ಪುನಃ ತುಮಕೂರು ಕಡೆ ಹೋಗುವ ದಾರಿಯಲ್ಲಿ ಹೋಗುತ್ತಾ ಸ್ವಲ್ಪ ದೂರದಲ್ಲಿ ಹೋಗುತ್ತಾ ಇರುವಾಗ ನಮ್ಮಿಬ್ಬರನ್ನು ರನ್ನಿಂಗ್ ಇರುವ ಗಾಡಿಯಿಂದ ಇಳಿಸಿದರು. ನಾವು ಅಲ್ಲಿಂದ ನಡೆದುಕೊಂಡು ಪೋಲೀಸ್ ಠಾಣೆಗೆ ಹೋದೆವು. ಅಲ್ಲಿ ರಘುರವರು ದೂರು ಕೊಟ್ಟಿರುತ್ತಾರೆ.

ನಾವು ದೂರು ಕೊಟ್ಟ ನಂತರ ಪೋಲೀಸರ ವಾಹನದಲ್ಲಿ ನಾವು ಘಟನಾ ಸ್ಥಳ ತೋರಿಸಲು ಹೋಗುವಾಗ ಹಳೇ ನಿಜಗಲ್ ರೈಲ್ವೆ ಗೇಟ್ ಬಳಿ ಒಬ್ಬ ವ್ಯಕ್ತಿಗೆ ತುಂಬಾ ಏಟಾಗಿದ್ದು ಆತನನ್ನು ಅಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು.

ನಂತರ ದಾಬಾಸ್‌ಪೇಟೆ ಪೋಲೀಸರು ನಮ್ಮನ್ನು ಆರೋಪಿಗಳು ವಾಹನಕ್ಕೆ ಹತ್ತಿಸಿಕೊಂಡ ಸ್ಥಳದಲ್ಲಿ ಒಂದು ಮಹಜರ್ ಮಾಡಿರುತ್ತಾರೆ. ನಾವು ಸ್ಥಳ ತೋರಿಸಿರುತ್ತೇವೆ. ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಮಹಜರನ್ನು ತೋರಿಸಿದ್ದು ಸಾಕ್ಷಿ ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ನಿಪಿ 2 ಮಹಜರಿನಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು.

ಆದಾದ ನಂತರ ಪೋಲೀಸರು ಆರೋಪಿಗಳು ರಘುರವರಿಂದ ಹಣ ಡ್ರಾ ಮಾಡಿಸಿಕೊಂಡ ಹೆಚ್ ಡಿ ಎಫ್ ಸಿ ಎ ಟಿ ಎಂ ಬಳಿ ಕರೆದುಕೊಂಡು ಹೋಗಿ

ಅಲ್ಲಿ ಇನ್ನೊಂದು ಮಹಜರ್‌ನ್ನು ಮಾಡಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಮಹಜರನ್ನು ತೋರಿಸಿದ್ದು ಸಾಕ್ಷಿ ನಿಪಿ 3 ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು.

ನಂತರ ಪಂಡಿತನಹಳ್ಳಿ ಬಳಿ ರಘುರವರಿಂದ ಮತ್ತು ನನ್ನಿಂದ ಬಲಾತ್ಕಾರವಾಗಿ ಹಣ, ಮೊಬೈಲ್ ಎ ಟಿ ಎಂ ಕಾರ್ಡ್‌ನ್ನು ಆರೋಪಿಗಳು ಕಿತ್ತುಕೊಂಡ ಸ್ಥಳವನ್ನು ನಾವು ಪೋಲೀಸರಿಗೆ ತೋರಿಸಿದ್ದು ಸದರಿ ಸ್ಥಳದಲ್ಲಿ ಪೋಲೀಸರು ಮಹಜರನ್ನು ಮಾಡಿರುತ್ತಾರೆ. ಸದರಿ ನಿಪಿ 4 ಮಹಜರಿನಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು.

ದಿನಾಂಕ 26-02-2014 ರಂದು ನಮ್ಮನ್ನು ದೊಡ್ಡಬೆಳವಂಗಲ ಪೋಲೀಸರು ಠಾಣೆಗೆ ಕರೆಸಿದ್ದರು. ಅಲ್ಲಿ ಒಟ್ಟು ಆರು ಜನರನ್ನು ಪೋಲೀಸರು ನಮಗೆ ತೋರಿಸಿದ್ದು ಅವರನ್ನು ಗುರುತಿಸುವಂತೆ ಕೇಳಿದರು. ನಾನು ಅವರನ್ನು ನೋಡಿ ಗುರುತಿಸಿ ಅವರೇ ನನ್ನನ್ನು ಮತ್ತು ರಘುರವರನ್ನು ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ಹಣ , ಮೊಬೈಲ್ ಹಾಗೂ ಎ ಟಿ ಎಂ ಕಾರ್ಡ್‌ನ್ನು ತೆಗೆದುಕೊಂಡು ಹೋಗಿ ಮತ್ತು ಎಟಿಎಂ ನಲ್ಲಿ ಹಣ ಡ್ರಾ ಮಾಡಿರುತ್ತಾರೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

ಬಜಾಜ್ ಚೇತಕ್ ಗಾಡಿಯಲ್ಲಿ ಇಬ್ಬರು ಆರೋಪಿಗಳು ಬಂದರು. ಉಳಿದ ನಾಲ್ಕು ಜನ ನಮ್ಮನ್ನು ಹತ್ತಿಸಿಕೊಂಡ ಟಾಟಾ ಮ್ಯಾಜಿಕ್ ಗಾಡಿಯಲ್ಲಿದ್ದರು. ನನ್ನನ್ನು ಮತ್ತು ರಘುರವರನ್ನು ದೋಚಿದ ಐದು ಜನರನ್ನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು ಗುರುತಿಸುತ್ತೇನೆ. ಇನ್ನೊಬ್ಬ ಆಸಾಮಿಯನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ಮತ್ತು ಚಾಸಾ 1 ರವರಿಂದ ಆರೋಪಿಗಳು ಅಪಹರಿಸಿದ ವಸ್ತುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ.

ಸಾಕ್ಷಿಗೆ ಒಂದು ಮೊಬೈಲನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಅದು ನನ್ನ ಮೈಕ್ರೋ ಮ್ಯಾಕ್ಸ್ ಮೊಬೈಲ್ ಆಗಿರುತ್ತದೆ ಎಂದು ಹೇಳುತ್ತಾರೆ. ಕಾರಣ ಸದರಿ ಮೊಬೈಲನ್ನು ಮುಮಾ 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಃ**

ಆರೋಪಿತರ ಪರ ಹಾಜರಿರುವ ಶ್ರೀ ಎನ್ ಕೆ ವಕೀಲರು ಅವರ ಸಹ ವಕೀಲರು ಮಗುವಿಗೆ ಅನಾರೋಗ್ಯ ಇರುವ ಕಾರಣ ಈ ದಿನ ಗೈರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ಬೇಕೆಂದು ಕೇಳುತ್ತಾರೆ ನ್ಯಾಯತಾ ದೃಷ್ಟಿಯಿಂದ ರೂ.1000 ರೂಪಾಯಿ ಖರ್ಚು ನೀಡುವ ಶರತ್ತಿನ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಗಿದೆ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ತಾಃ 29-12-2017 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು 1, 4 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್ ಡಿ ವಕೀಲರಿಂದ ಃ**

ಈ ಘಟನೆಯ ಸಂಬಂಧ ಒಟ್ಟು ನಾಲ್ಕು ಬಾರಿ ನಾನು ಪೋಲೀಸ್ ಠಾಣೆಗೆ ಹೋಗಿದ್ದೆ. ಪೋಲೀಸರು ಒಮ್ಮೆ ಲಿಖಿತ ನೋಟೀಸು ಕೊಟ್ಟಿದ್ದರು ಇನ್ನೊಮ್ಮೆ ಪೋನ್ ಮಾಡಿ ಠಾಣೆಗೆ ಬರುವಂತೆ ಹೇಳಿದ್ದರು. ದಿನಾಂಕ 26-03-2014 ರಂದು ದೊಡ್ಡಬೆಳವಂಗಲ ಪೋಲೀಸ್ ಠಾಣೆಗೆ ಹೋಗಿದ್ದೆ. ದಿನಠಾಕ 15-07-2014 ರಂದು ಪೋಲೀಸರು ಲಿಖಿತ ನೋಟೀಸು ಕೊಟ್ಟು ಠಾಣೆಗೆ ಕರೆಸಿದ್ದರು. ಆ ನಂತರ ನಾನು ಪೋಲೀಸ್ ಠಾಣೆಗೆ ಹೋಗಿಲ್ಲ. ಪೋಲೀಸ್ ಠಾಣೆಗೆ ನಾನು ಮತ್ತು ನನ್ನ ಸ್ನೇಹಿತ ಚಾಸಾ 1 ರಘು ಜೊತೆಯಲ್ಲೇ ಹೋಗಿದ್ದೆವು.

ನಿಜಗಲ್ ರೈಲ್ವೆ ಗೇಟ್ ಬಳಿ ಒಬ್ಬ ವ್ಯಕ್ತಿಯ ಕೊಲೆಯಾಗಿದೆ ಎನ್ನುವ ಸಂಬಂಧ ಪೋಲೀಸರು ನನ್ನನ್ನು ಕರೆಸಲಿಲ್ಲ, ದಾಬಾಸ್‌ಪೇಟೆ ಪೋಲೀಸ್ ಠಾಣೆಗೆ ಹೋಗುವುದಾದರೆ ನಿಜಗಲ್ ರೈಲ್ವೆ ಗೇಟ್ ದಾಟಿಕೊಂಡು ಹೋಗಬೇಕಾಗುವುದಿಲ್ಲ. ನಾನು 15-07-14 ರಂದು ಮತ್ತು 26-03-14 ರಂದು ಪೋಲೀಸ್ ಠಾಣೆಗೆ ಹೋದಾಗ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆ

ಸಂದರ್ಭದಲ್ಲಿ ನನ್ನ ಸ್ನೇಹಿತ ರಘು ಸಹ ಅಲ್ಲಿ ಇದ್ದರು. ಪೋಲೀಸ್ ಠಾಣೆಯಲ್ಲಿ ನಾನು ಎರಡು ಸಹಿ ಮಾಡಿದ್ದೇನೆ. ಘಟನೆಯ ಸಂಬಂಧ ನಾನು ಪೋಲೀಸರಿಗೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೆ ಆ ವಿಚಾರವಾಗಿ ನಾನು ಪೋಲೀಸ್ ಠಾಣೆಯಲ್ಲೇ ಸಹಿ ಮಾಡಿದ್ದೆ ಎಂದರೆ ಸರಿ.

ಬಜಾಜ್ ಚೇತಕ್‌ನಲ್ಲಿ ಆರೋಪಿತರು ಬಂದಿದ್ದಾರೆಂದು ನನಗೆ ದೊಡ್ಡಬೆಳವಂಗಲ ಪೋಲೀಸರು ಹೇಳಿದ ನಂತರ ಗೊತ್ತಾಯಿತು. ಸದರಿ ಆರೋಪಿಗಳ ಹೆಸರೂ ಸಹ ಪೋಲೀಸರ ಮುಖಾಂತರ ನನಗೆ ಗೊತ್ತಾಯಿತು. ಮು ಮಾ 1 ರಂತಹ ವಾಚು ಮತ್ತು ಮು ಮಾ 2 ರಂತಹ ಮೊಬೈಲ್ ಮಾರ್ಕೆಟ್‌ನಲ್ಲಿ ಸಿಗುತ್ತದೆ ಎಂದರೆ ಸರಿ.

ದಿನಾಂಕ 12-02-14 ರಂದು ಆರೋಪಿತರು ನನ್ನಿಂದ ಯಾವುದೇ ಹಣ, ಮೊಬೈಲ್ ಹಾಗೂ ಎ ಟಿ ಎಂ ಕಾರ್ಡ್‌ನ್ನು ಕಿತ್ತುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಗಳು ಟಾಟಾ ಏ ಸಿ ಗಾಡಿಯಲ್ಲಿ ಬಂದಿರಲಿಲ್ಲ ಚಾಕು ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಅವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀಮತಿ ಬಿ ಜೆ ಎಸ್ ವಕೀಲರಿಂದಃ</u>**

ನಾವು ಪೋಲೀಸರಿಗೆ ದೂರು ಕೊಡುವ ಸಂದರ್ಭದಲ್ಲಿ ಮೂರು ವರ್ಷಗಳಿಂದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದೆ ಎಂದರೆ ಸರಿ ಪೋಲೀಸರು ಬೆಳಗ್ಗೆ ಸುಮಾರು 6 ಗಂಟೆಗೆ ಸ್ಥಳ ಮಹಜರ್ ಮಾಡಿರುತ್ತಾರೆ. ಪೋಲೀಸರು ಮಹಜರ್‌ನಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಖಾಲಿ ಪೇಪರ್‌ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಶದಲ್ಲಿದ್ದ 3,700 ರೂಪಾಯಿ ನಗದು ಹಣ , ಮೊಬೈಲನ್ನು ಆರೋಪಿಗಳು ಘಟನೆಯ ದಿವಸ ಕಿತ್ತುಕೊಂಡಿಲ್ಲ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಗೆ ನನ್ನನ್ನು ಪೋಲೀಸರು ಕರೆಸಿ ಆರೋಪಿತರನ್ನು ನನಗೆ ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನ್ಯಾಯಾಲಯದಲ್ಲಿ ಪ್ರಥಮ ಬಾರಿ ನೋಡಿದ್ದೇನೆ ಅದಕ್ಕೂ ಮೊದಲು ನೋಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಟಾಟಾ ಮ್ಯಾಜಿಕ್ ಗಾಡಿಯಲ್ಲಿ ಬಂದವರಲ್ಲಿ ಗಾಡಿ ತುಮಕೂರಿಗ ಹೋಗುತ್ತದೆಯಾಎಂದು ಕೇಳಿದ್ದೆವು ಹಾಗೂ ಅದರಲ್ಲಿದ್ದವರು ಹೌದು ಎಂದು ಹೇಳಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ನಮ್ಮ ಕಂಪನಿಯಲ್ಲಿ ಯಾವುದೇ ನಾಟಕ ನಡೆದಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮಾನ್ಯ ಸ ಸ ರವರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃ**

ಮು ಮಾ 2 ಮೊಬೈಲನ್ನು ನೆಲಮಂಗಲ ಪೋಲೀಸ್ ಠಾಣೆಯಲ್ಲಿ ಪೋಲೀಸರು ನನಗೆ ತೋರಿಸಿದ್ದರು. ಅದು ನನ್ನ ಮೊಬೈಲ್ ಆ ಸಂದರ್ಭದಲ್ಲಿ ಪೋಲೀಸರು ಆರೋಪಿ ರಾಜುವನ್ನು ತೋರಿಸಿರುತ್ತಾರೆ ಹಾಗೂ ಸದರಿ ಆರೋಪಿ ಟಾಟಾ ಮ್ಯಾಜಿಕ್ ಗಾಡಿಯನ್ನು ಘಟನೆಯ ದಿವಸ ಓಡಿಸುತ್ತಿದ್ದ ಎಂದು ಹೇಳಿದರು. ಆತನೇ ನಮ್ಮನ್ನು ದರೋಡೆ ಮಾಡಿರುತ್ತಾನೆ. ಮು ಮಾ 1 ವಾಚು ಚಾಸಾ 1 ರಘುರವರದ್ದು. ನ್ಯಾಯಾಲಯದ ಮುಂದಿರುವ 6ನೇ ಆರೋಪಿ ರಾಜುನನ್ನು ನೋಡುತ್ತಿದ್ದು ಗುರುತಿಸುತ್ತೇನೆ.

**ಪಾಟೀ ಸವಾಲು 1, 4 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್ ಡಿ ವಕೀಲರಿಂದ ಃ**

ಮು ಮಾ 2 ಮೊಬೈಲ್ ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಸದರಿ ಮೊಬೈಲ್‌ಗೆ ಸಂಬಂಧಿಸಿದ ದಾಖಲೆಯನ್ನು ಪೋಲೀಸರಿಗೆ ಕೊಟ್ಟಿಲ್ಲ. ಸದರಿ ಮೊಬೈಲ್ ನನ್ನ ವಶಕ್ಕೆ ಕೊಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿಲ್ಲ. ಪೋಲೀಸರ ಮಾತು ಕೇಳಿಕೊಂಡು 6ನೇ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6ನೇ ಆರೋಪಿ ನನಗೆ ಚಾಕು ತೋರಿಸಿ ಬೆದರಿಕೆ ಒಡ್ಡಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿವಸ ರಾತ್ರಿ ನಾನು ಮದ್ಯಪಾನ ಮಾಡಿ ಸಂಶಯಾಸ್ಪದವಾಗಿ ಗೇಟಿನ ಬಳಿ ಅಡ್ಡಾಡುತ್ತಿದ್ದರಿಂದ

ಪೋಲೀಸರು ನನ್ನ ಮೇಲೆ ಅನುಮಾನ ಬಂದು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನಂತರ ಪೋಲೀಸರ ಹೇಳಿಕೆಯ ಮೇರೆಗೆ ನಾನು ನ್ಯಾಯಾಲಯದಲ್ಲಿ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಆರೋಪಿಗಳು ನನ್ನಿಂದ ಮೊಬೈಲ್ , ಹಣ ಕಿತ್ತುಕೊಂಡಿಲ್ಲ ಎಂದರೆ ಸರಿಯಲ್ಲ.

(2ನೇ ಆರೋಪಿ ಪರ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.)

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ದಂ.ಪ್ರ.ಸಂ. ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆಃ**

**ಮುಖ್ಯ ವಿಚಾರಣೆ –ಸರ್ಕಾರಿ ಅಭಿಯೋಜಕರಿಂದ**

**(ಆರೋಪಿ ಪರ ವಕೀಲರು ದಂ.ಪ್ರ.ಸಂ. ಕಲಂ 311 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿ ಸಾಕ್ಷಿಯ ಪಾಟೀ-ಸವಾಲಿಗೆ ಅವಕಾಶ ನೀಡಲಾಗಿದೆ)**

**ದಿನಾಂಕ 28-10-2017ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ –ಸರ್ಕಾರಿ ಅಭಿಯೋಜಕರಿಂದ**

**ಪಾಟೀ-ಸವಾಲುಃ**

( ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**